## ಪ್ರಾರ್ಥನೆ

### ವೇದಮಂತ್ರಗಳಿಂದ

**ಉಪ ತ್ವಾಗ್ನೇ ದಿವೇ ದಿವೇ ದೋಷಾವಸ್ತರ್ಧಿಯಾ ವಯಮ್**
**ನಮೋ ಭರಂತ ಏಮಸಿ** (ಋಗ್ವೇದ ೧.೧.೭)

ಅಂಧಕಾರವನ್ನು ಹೋಗಲಾಡಿಸುವ ದೇವನೇ, ನಾವು ಬುದ್ಧಿಪೂರ್ವಕವಾಗಿ ಅಹೋರಾತ್ರಿ ನಮ್ಮ ನಮನಗಳನ್ನು ನಿನಗೆ ಸಲ್ಲಿಸುತ್ತೇವೆ.

**ಸ ನಃ ಪಿತೇವ ಸೂನವೇಽಗ್ನೇ ಸೂಪಾಯನೋ ಭವ**
**ಸಚಸ್ವಾ ನಃ ಸ್ವಸ್ತಯೇ** (ಋಗ್ವೇದ ೧.೧.೯)

**ಹೇ** ಜ್ಯೋತಿರ್ಮಯ ದೇವನೇ, ತಂದೆ ತನ್ನ ಮಗನಿಗೆ ಹೇಗೆ ಸುಲಭ ಸಾಧ್ಯನೋ ಹಾಗೆಯೇ ನಮಗೂ ಸುಲಭಸಾಧ್ಯನಾಗು; ನಮಗೆ ನಿಲುಕುವಂತಿರು ಮತ್ತು ನಮಗೆ ನಿನ್ನ ಹರಕೆಗಳನ್ನು ನೀಡು.

**ಯೋ ವಿಶ್ವಾಭಿ ವಿಪಶ್ಯತಿ ಭುವನಾ ಸಂ ಚ ಪಶ್ಯತಿ**
**ಸ ನಃ ಪೂಷಾವಿತಾ ಭುವತ್** (ಋಗ್ವೇದ ೩.೬೨.೯)

ವಿಶ್ವಪಾಲಕನಾದ ಪ್ರಭುವೇ, ಈ ಜಗತ್ತಿನ ಎಲ್ಲ ವಸ್ತುಗಳ ಹಿಂದಿನ ಸತ್ಯವನ್ನು ನೀನು ಅರಿತಿರುವೆ. ಅಂತಹ ನೀನು ನಮ್ಮನ್ನು ಕಾಪಾಡು.

**ಅಗ್ನೇ ವ್ರತಪತೇ ವ್ರತಂ ಚರಿಷ್ಯಾಮಿ ತಚ್ಛಕೇಯಂ**
**ತನ್ಮೇ ರಾಧ್ಯತಾಮ್ ಇದಮಹಮನೃತಾತ್ ಸತ್ಯಮುಪೈಮಿ**
(ಶುಕ್ಲ ಯಜುರ್ವೇದ ಸಂಹಿತಾ, ೧.೫)

**ತೇಜ**ಸ್ವಿಯಾದ ಪ್ರಭುವೇ, ನೀನು ವ್ರತಗಳನ್ನು ಕಾಪಾಡುವವನು. ನಾನು ನನ್ನ ಅಲ್ಪಾತ್ಮವನ್ನು ಗೆಲ್ಲಲು ದೃಢಸಂಕಲ್ಪ ಮಾಡಿದ್ದೇನೆ. ಅದಕ್ಕೆ ಬೇಕಾದ ಶಕ್ತಿ ನನ್ನಲ್ಲಿರುವಂತೆ ಮಾಡು. ನನ್ನ ಯತ್ನವನ್ನು ಸಫಲಗೊಳಿಸು. ನಿನ್ನ ಅನುಗ್ರಹದೊಂದಿಗೆ, ಅನೃತವನ್ನು ತ್ಯಜಿಸಿ ನಾನು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವಂತಾಗಲಿ.

**ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ ।**
**ಉರ್ವಾರುಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯಮಾಮೃತಾತ್ ॥**
(ಶುಕ್ಲ ಯಜುರ್ವೇದ ಸಂಹಿತಾ, ೩.೬೦)

**ಹೇ** ಪ್ರಭು, ನೀನು ಮೂರು ಕಣ್ಣುಳ್ಳವನು. ಬಲವನ್ನು ಹೆಚ್ಚಿಸುವವನು. ಮಧುರಸ್ವಭಾವದವನು. ಅಂತಹ ನಿನ್ನನ್ನು ಪ್ರಾರ್ಥಿಸುತ್ತೇನೆ. ಹೇ ಭಗವಂತ, ಸೌತೇಕಾಯಿಯು ತನ್ನ ಬಳ್ಳಿಯಿಂದ ಹೇಗೆ ಕಳಚಿಕೊಳ್ಳುವುದೋ ಹಾಗೆಯೇ ನಮ್ಮನ್ನೂ ಮೃತ್ಯುವಿನಿಂದ ಬೇರ್ಪಡಿಸು. ನಮ್ಮನ್ನು ಅಮೃತತ್ವದಿಂದ ಬೇರ್ಪಡಿಸದಿರು.

**ಯಾ ತೇ ರುದ್ರ ಶಿವಾ ತನೂರಘೋರಾ ಪಾಪಕಾಶಿನೀ ।**
**ತಯಾ ನಸ್ತನ್ವಾ ಶಂತಮಯಾ ಗಿರಿಶಂತ ಅಭಿಚಾಕಶೀಹಿ ॥**
(ಶುಕ್ಲ ಯಜುರ್ವೇದ ಸಂಹಿತಾ, ೧೬.೨)

**ಹೇ** ರುದ್ರನೇ, ನೀನು ಧವಳಗಿರಿಯಲ್ಲಿದ್ದುಕೊಂಡು, ಸುಖವನ್ನುಂಟು ಮಾಡುವವನು. ನಿನ್ನ ಶರೀರವು ಮಂಗಲಮಯವಾಗಿದೆ. ಅಘೋರವೂ ಪುಣ್ಯಪ್ರಕಾಶವೂ ಪೂರ್ಣಾನಂದರೂಪವೂ ಆಗಿದೆ. ಅಂತಹ ನಿನ್ನ ಶರೀರದ ಮೂಲಕ ನಮ್ಮನ್ನು ನೋಡು.

## ಸೂಕ್ತಿಪ್ರಭ

### ವ್ಯಾಕುಲತೆ

**ನೀನು** ಹುಚ್ಚನಾಗಬೇಕಾದರೆ, ವಿಷಯವಸ್ತುಗಳಿಗಾಗಿ ಆಗಬೇಡ. ದೇವರ ಮೇಲಿನ ಪ್ರೇಮದಿಂದ ಹುಚ್ಚನಾಗು. *–ಶ್ರೀರಾಮಕೃಷ್ಣ*

**ದೇವ**ರನ್ನು ಪಡೆಯಬೇಕಾದರೆ ಎಂತಹ ಪ್ರೇಮ ಬೇಕು ಗೊತ್ತಿದೆಯೇ? ತಲೆಗೆ ಗಾಯವಾದ ನಾಯಿ ಭಯದಿಂದ ಓಡುವಂತೆ ಭಗವಂತನಿಗಾಗಿ ವ್ಯಾಕುಲ ಪಡಬೇಕು. *–ಶ್ರೀರಾಮಕೃಷ್ಣ*

**ಭ**ಗವಂತನು ನಮ್ಮ ಜೀವದ ಜೀವ; ನಮ್ಮ ಆತ್ಮದ ಆತ್ಮ. ಅವನು ನಮ್ಮ ಹೃದಯದೊಡೆಯ. ಅವನು ನಮ್ಮವನೇ. ಕಾತುರ ಹೃದಯದಿಂದ ಅವನಿಗಾಗಿ ವ್ಯಾಕುಲನಾಗು. *–ಸ್ವಾಮಿ ಬ್ರಹ್ಮಾನಂದ*

**ಮ**ಗು, ವ್ಯಾಕುಲತೆಯನ್ನು ಯಾರೂ ಹೇಳಿಕೊಡಲು ಸಾಧ್ಯವಿಲ್ಲ. ಕಾಲ ಬಂದಾಗ ಅದು ತನಗೆ ತಾನೇ ಬರುವುದು. ನಿನ್ನೊಳಗೆ ಭಗವಂತನ ಬಯಕೆಯನ್ನು ಹೆಚ್ಚು ಹೆಚ್ಚು ನೀನು ಭಾವಿಸಿದಂತೆಲ್ಲ, ನಿನ್ನ ಹೃದಯದ ವ್ಯಾಕುಲತೆಯೂ ಹೆಚ್ಚುತ್ತ ಹೋಗುವುದು. ಹಾಗಾಗದಿದ್ದರೆ, ಕಾಲ ಒಡಗೂಡಿಬಂದಿಲ್ಲವೆಂದು ತಿಳಿ. ತಾಯಿಗೆ ಗೊತ್ತು, ಮಗುವಿಗೆ ಯಾವಾಗ ಆಹಾರವುಣ್ಣಿಸಬೇಕೆಂಬುದು. *–ಸ್ವಾಮಿ ಶಿವಾನಂದ*

**"ಗೆ**ಳೆಯಾ, ನನ್ನದು ಬರೀ ಮಾತಲ್ಲ. ಹೃದಯದ ವೇದನೆ ನನ್ನದು! ನಾನು ನನ್ನ ಪ್ರಿಯತಮನನ್ನು ಸೇರಲೇ ಬೇಕು" – ಈ ರೀತಿ ಗೋಪಿಯರು ವ್ಯಾಕುಲಪಟ್ಟಂತೆ, ನೀನೂ ಕಾತುರನಾಗು. ಆ ಪ್ರೇಮವನ್ನು ಗಾಢವಾಗಿ ಸೇವಿಸು. ಭಗವಂತನಿಗಾಗಿ ಉನ್ಮತ್ತನಾಗು. ಪ್ರೇಮ ಪಥವೆಂದರೆ ಇದೇ. *– ಸ್ವಾಮಿ ಪ್ರೇಮಾನಂದ*

**ಬ**ರೀ ತೋರಿಕೆಯ ಶಾಸ್ತ್ರಾಧ್ಯಯನ ಮತ್ತು ಅಲ್ಪ ಧ್ಯಾನಾಭ್ಯಾಸಗಳು ಭಗವತ್ಸಾಕ್ಷಾತ್ಕಾರಕ್ಕಾಗಿ ಎಳ್ಳಷ್ಟೂ ಸಾಲವು. ಹೃದಯವು ಅವನಿಗಾಗಿ ಹತಾಶವಾಗಬೇಕು, ಮೊರೆಯಿಡಬೇಕು. *–ಸ್ವಾಮಿ ತುರೀಯಾನಂದ*

**ಎ**ಷ್ಟು ಜನ ತಾನೇ ಭಗವಂತನ ಬಗ್ಗೆ ಕೇಳಲು ಇಚ್ಛಿಸುವರು? ಆ ಆಶೆ ಒದಗಿಬರುವುದು ಭಗವಂತನ ಕೃಪೆಯಿಂದ ಮಾತ್ರ. ಭಗವಂತನ ಕುರಿತಾದ ನೈಜ ವ್ಯಾಕುಲತೆ ಮಹಾತ್ಮರ ಸಂಗದಿಂದಷ್ಟೇ ಲಭಿಸುವುದು. ಬಹು ಸತ್ಕಾರ್ಯಗಳ ಆಚರಣೆಯ ನಂತರವಷ್ಟೇ ಒಬ್ಬನು ಅಂತಹ ಸತ್ಸಂಗವನ್ನು ಪಡೆಯುವನು. *–ಸ್ವಾಮಿ ಅದ್ಭುತಾನಂದ*

**ಸ್ವಾ**ತಂತ್ರ್ಯವೆಂಬುದು ಆಯ್ಕೆಯ ವಸ್ತುವಲ್ಲ; ಅದು ನಿರ್ದಿಷ್ಟ ಮಾರ್ಗ. ಸಿದ್ಧಿಯ ತನಕವೂ ನಿಲ್ಲದ, ತನ್ನ ಆತ್ಮಶಾಂತಿಗಾಗಿ ಅವಿರತ ವ್ಯಾಕುಲತೆಯೇ ಅದು. *–ಅನಾಮಿಕ*

**ನ**ಮ್ಮಲ್ಲಿ ಬಹುಜನರ ಜೀವಿತದಲ್ಲಿ ಕಾಲವೊಂದು ಬರುವುದು. ಆಗ ನಾವು ನಮ್ಮ ಪ್ರಾಪಂಚಿಕ ಭವಿಷ್ಯದ ಬಗ್ಗೆ ಅಧೀರರಾಗಿರುವೆವು. ನಮ್ಮ ಒಲವು ಮತ್ತು ಕರ್ತವ್ಯಗಳ ನಡುವಣ ಸಂಘರ್ಷದಲ್ಲಿ ಸಿಲುಕಿ ತೊಳಲಾಡುವೆವು. ಆಗ ನಾವು ನಮ್ಮೆಲ್ಲ ಭಾವೋದ್ರೇಕವನ್ನೂ ಕ್ಷೋಭೆಗೊಂಡ ಆತ್ಮದ ತುಮುಲವನ್ನೂ, ದಿವ್ಯಪ್ರೇಮಕ್ಕಾಗಿನ ಉತ್ಸಾಹಭರಿತ ವ್ಯಾಕುಲಭಾವವಾಗಿ ಪರಿವರ್ತಿಸುವೆವು. ನಮ್ಮನ್ನು ಹರ್ಷಗೊಳಿಸುವ ಭರವಸೆ ಇದೊಂದೇ, ನಮ್ಮನ್ನು ರಕ್ಷಿಸುವ ಶಕ್ತಿ ಇದೊಂದೇ ಎಂದು ಭಾವಿಸಿ, ಆ ದಿವ್ಯಪ್ರೇಮದ ಕೃಪೆಯನ್ನು ಎದುರು ನೋಡುವೆವು.
*–ಬುಲ್ವರ್*